ಕೆ.ಸಿ.ಡಿ. ಸಮಾಚಾರ
ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

1917-2017
100 Years of Excellence in Education

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 11 ಸಂಪುಟ: 3 ಪುಟ: 2

@ KACD100
Readers can view at kcd2017.blogspot.in

## ಬೆಳಕು

ರಾಷ್ಟ್ರೀಯ ಭಾವೈಕ್ಯತೆಯನ್ನು ಇಟ್ಟಿಗೆ, ಗಾರೆಗಳಿಂದ ಕಟ್ಟುವುದಿಲ್ಲ. ಅದು ವ್ಯಕ್ತಿಯ ಅಂತರಾಳದಿಂದ ಉದ್ಭವಿಸಬೇಕು.

–ಡಾ.ಎಸ್. ರಾಧಾಕೃಷ್ಣನ್

## Unbelievable facts

**East or west, India is the best**

Magnetic Hill is a gravity hill located near Leh in Ladakh, India. The hill is alleged to have magnetic properties strong enough to pull cars uphill and force passing aircraft to increase their altitude in order to escape magnetic interference.

Viswanathan Anand is the first player in chess history to have won the World Championship in three different formats: knockout, tournament, and match.

Chess was invented in India.

Buttons were invented in India. Yes, your shirt's buttons.

We also invented the ruler.

And shampoo.

And discovered the number zero.

And the value of pi.

And trigonometry, algebra, calculus.

And cataract surgery.

And plastic surgery.

And diamond mining.

And water on the moon.

Until 1986, the only place where diamonds had been officially found was in India.

India has banned all captive dolphins, stating that dolphins should be viewed of non human persons.

India's tech capital, Bangalore, has increased its office supply by six times since 2006, and now has more Grade-A offices than Singapore.

India is the largest producer of films in the world.

India is the largest milk producer in the world.

-continues in next episode

# ವಿದ್ಯಾರ್ಥಿಗಳ ಸರ್ವೋತೋಮುಖ ಬೆಳವಣಿಗೆಗೆ ಕಾರ್ಯಗಾರಗಳು ಸಹಾಯಕ




ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎಸ್.ಎಸ್.ಕಟ್ಟಿಮನಿ ಕೆರಿಯರ್ ಡೆವಲೆಪಮೆಂಟ್ ಕಾರ್ಯಾಗಾರವನ್ನು ಉದ್ಘಾಟಿಸುತ್ತಿರುವದು.

ನಮ್ಮ ಪದವಿಗಳು ಕೇವಲ ವಿಸಿಟಿಂಗ್ ಕಾರ್ಡ ಮತ್ತು ಲೇಟರ್ ಹೆಡ್‌ಗಳಿಗೆ ಸಿಮೀತವಾಗಿದೇ, ಅವು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುವ ಸಾಧನೆಗಳಾಗಬೇಕು ಎಂದು ಬೆಂಗಳೂರಿನ ಭಾರತಿ ಇನ್‌ಸ್ಟೈಟ್ಸ್‌ನ ತರಬೇತುದಾರ ನಿವೃತಿ ಹೊಂದಿದ ಕ್ಯಾಪ್ಟನ್ ಸಿ.ಎಸ್.ಆನಂದ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕಾಲೇಜಿನ 'ಕೆರಿಯರ್ ಆಂಡ್ ಡೆವಲೆಪಮೆಂಟ್ ಘಟಕ'ವು ಆಯೋಜಿಸಿದ "ಕೆರಿಯರ್ ಡೆವಲೆಪಮೆಂಟ್" ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇಂದು ವಿದ್ಯಾರ್ಥಿಗಳಲ್ಲಿ ತಮ್ಮ ಭವಿಷ್ಯತ್ತಿನ ಕನಸುಗಳನ್ನು ಯಾವ ರೀತಿಯಾಗಿ ಇಡೇರಿಸಿಕೊಳ್ಳಬೇಕು ಎಂಬುವದರ ಕುರಿತು ಗೊಂದಲದಲ್ಲಿ ಇದ್ದಾರೆ. ಆದ್ದರಿಂದ ಸೂಕ್ತ ಸಮಯದಲ್ಲಿ ಮುಂದಿನ ಭವಿಷ್ಯತ್ತಿನ ಗೊಸ್ಕರ ಜೀವನದಲ್ಲಿ ಏನನ್ನಾದರೂ ಸಾಧಿಸಲು ವಿದ್ಯಾರ್ಥಿಗಳಾದ ನೀವು ಸಮಯ ವ್ಯರ್ಥ ಮಾಡದೇ ನಿರ್ದಿಷ್ಟ ಗುರಿ ಮತ್ತು ಉದ್ದೇಶದೂಂದಿಗೆ ಮುಂದೆ ಸಾಗಬೇಕು ಎಂದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಖಾಸಗಿ ಮತ್ತು ಸರಕಾರಿ ಉನ್ನತ ಹುದ್ದೆಗಳಿಗೆ ಭಾಷಾ ಕೌಶಲ್ಯ, ಸಂವಹನ ಕೌಶಲ್ಯ ಮುಖ್ಯವಾಗಿದ್ದು, ಅವುಗಳನ್ನು ಮೈಗೂಡಿಸಿಕೊಂಡಾಗ ಸುಲಭವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕೆರಿಯರ್ ಡೆವಲೆಪಮೆಂಟ್ ಘಟಕದ ಸಂಂ–ಯೋಜಕಿ ಶ್ರೀಮತಿ ಡಾ. ಆರ್ ಎನ್ ಕೆಂಚಪ್ಪನವರ ಮಾತನಾಡಿ ಈ ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಯಾವ ರೀತಿಯಾಗಿ ತಮ್ಮ ಭವಿಷ್ಯತ್ತಿನಲ್ಲಿ ಸಮಸ್ಯೆಗಳನ್ನು ಎದುರಿಸಬೇಕು ಎಂಬುದನ್ನು ಅರಿತು ಮೂರು ಗೋಷ್ಠಿಗಳಲ್ಲಿ ಭವಿಷ್ಯತ್ತಿನ ಸವಾಲುಗಳು, ಆತ್ಮ ವಿಶ್ವಾಸವನ್ನು ಹೇಗೆ ಬೆಳಸಿಕೊಳ್ಳಬೇಕು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯಾವ ರೀತಿಯಾಗಿ ಸಿದ್ಧತೆ ನಡೆಸಬೇಕು ಎಂಬ ವಿಷಯಗಳ ಕುರಿತು ಈ ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗುವುದು ಎಂದ ಅವರು ಅವಳಿನಗರದ 150ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎಸ್.ಎಸ್.ಕಟ್ಟಿಮನಿ ಮಾತನಾಡಿ ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯತ್ತಿನ ದೃಷ್ಟಿಕೋನದಿಂದ ಇಂತಹ ಕಾರ್ಯಗಾರಗಳು ವಿದ್ಯಾರ್ಥಿಗಳ ಸರ್ವೋತೋಮುಖ ಬೆಳವಣಿಗೆಗೆ ಬಹಳ ಮುಖ್ಯ ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಕ ವೃಂದದವರಾದ ಡಾ.ಶ್ರೀಮತಿ ಸುಕನ್ಯಾ ಜಾಲಿಹಾಳ; ಡಾ. ಸೌಭಾಗ್ಯ ಮತ್ತು ಡಾ ಅಶೋಕ ಹಾಜರಿದ್ದರು. ಕಾರ್ಯಕ್ರಮವನ್ನು ಡಾ ಎಂ.ಬಿ.ದಳಪತಿ ನಿರೂಪಿಸಿ ವಂದಿಸಿದರು.

# 'ಸ್ವಯಂ ಸೇವಕರ ಸಹಾಯದಿಂದ 50 ಶೌಚಾಲಯಗಳ ನಿರ್ಮಾಣ: ಡಾ.ಎಸ್.ಎಸ್.ಕಟ್ಟಿಮನಿ'



ಕೆಸಿಡಿ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಮನಸೂರ ಗ್ರಾಮದಲ್ಲಿ ಎನ್ ಎಸ್ ಎಸ್ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿರುವದು.

ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಘಟಕವು ಕರ್ನಾಟಕ ವಿಶ್ವವಿದ್ಯಾಲಯವು ದತ್ತು ಪಡೆದ ಮನಸೂರ ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದ ಮೂಲಕ ಸ್ವಯಂ ಸೇವಕರ ಸಹಾಯದಿಂದ 50 ಶೌಚಾಲಯಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಘೋಷಿಸಿದರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮನಸೂರ ಗ್ರಾಮದ ಜನರು ಶೌಚಾಲಯ ಕಟ್ಟಲು ಸೂಕ್ತ ಕಟ್ಟಡ ಸಾಮಗ್ರಿಗಳನ್ನು ತ್ವರಿತವಾಗಿ ಒದಗಿಸಿದರೆ ಅವರಿಗೆ ಕಟ್ಟಿಕೊಡಲು ಮೊದಲು ಪ್ರಾಶಸ್ತ್ಯ ನೀಡಲಾಗುವುದು ಎಂದರು. ಆದ್ದರಿಂದ ಮನಸೂರ ಗ್ರಾಮಸ್ಥರು ನಮ್ಮ ಈ ವಿಶೇಷ ಶಿಬಿರದ ಸದುಪಯೋಗ ಪಡೆದು ಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಶಿಬಿರದ ಮೂಲಕ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಆದರಿಂದ ಗ್ರಾಮಸ್ಥರ ಸಹಕಾರ ಅಗತ್ಯವಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರಾಷ್ಟ್ರೀಯ ಸೇವಾ ಯೋಜನೆಯ 'ಬ'ಘಟಕದ ಅಧಿಕಾರಿ ಡಾ ಬಿ.ಎಸ್ ಭಜಂತ್ರಿ ವಿಶೇಷ ಶಿಬಿರದ ಕುರಿತು ಮಾತನಾಡಿ ಮನಸೂರ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರ ಜೊತೆಗೆ ವಿವಿಧ ಜನಪರ ಮಾಹಿತಿ ಮತ್ತು ಅರಿವು ಕಾರ್ಯಕ್ರಮಗಳನ್ನು ಮಸೂರ ಗ್ರಾಮದ ಜನರ ಸಲುವಾಗಿ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಮನಸೂರ ಗ್ರಾಮ ಪಂಚಾಯಿತಿ ಸದಸ್ಯರಾದ ಶಂಕ್ರಪ್ಪ ಕುರಬರ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಈ ವಿಶೇಷ ಶಿಬಿರವನ್ನು ಆಯೋಜಿಸಿದ್ದು ತುಂಬ ಸಂತಸದ ವಿಷಯವಾಗಿದ್ದು, ಆದ್ದ–ರಿಂದ ನಾವೆಲ್ಲರೂ ಸ್ವಯಂ ಸೇವಕರಿಗೆ ಸಾಥ ನೀಡುತ್ತೇವೆ. ಹಳ್ಳಿಗಳ ಉದ್ದಾರದಿಂದ ದೇಶ ಉದ್ದಾರ ವಾಗುತ್ತದೆ ಆದ್ದರಿಂದ ನಾವೆಲ್ಲ ಗ್ರಾಮಸ್ಥರು ಸಹಕಾರ ನೀಡುವದು ಅಗತ್ಯವಾಗಿದೆ ಎಂದರು.

ಮತ್ತೊರ್ವ ಪಂಚಾಯತ ಸದಸ್ಯ ಠಾಣಯ್ಯ ಹಿರೇಮಠ ಮಾತನಾಡಿ ಈ ಯೋಜನೆಯ ಅವಶ್ಯಕತೆ ನಮ್ಮಗೆ ಬಹಳ ಇದ್ದು, ನಾವೆಲ್ಲರೂ ಒಗ್ಗಟ್ಟಿನ ಮೂಲಕ ಈ ಶಿಬಿರದ ಸದುಪಯೋಗ ಪಡೆದುಕೊಳ್ಳುತ್ತೇವೆ ಎಂದರು. ಮನಸೂರ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ರುಕ್ಮಿಣಿ ತೇಗೂರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯಲ್ಲಿ ಮಹಾದೇವಿ ಜಾಲಿಕಟ್ಟಿ, ರಿಯಾಜ ನಿಪ್ಪಾಣಿ, ಎಸ್‌ಡಿ ಎಮ್‌ಸಿ ಸದಸ್ಯರು ಹಾಜರಿದ್ದರು. ಕೆಸಿಡಿಯ ಎನ್ ಎಸ್ ಎಸ್ 'ಅ' ಘಟಕದ ಅಧಿಕಾರಿ ಡಾ ಝುಡ್ ಎ ಗುಳಗುಂದಿ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಲಕ್ಷ್ಮಿ ಮೊರಬ, ಮಂಜುಳಾ ಹೊಸಮನಿ ನಿರೂಪಿಸದರು. ಬಸವರಾಜ ವಂದಿಸಿದರು.

# ಏಡ್ಸ್ ರೋಗವು ದೇಶದ ಅಭಿವೃದ್ಧಿಗೆ ಮಾರಕ: ಮುಳಗುಂದ




**ಸಮಾಜಶಾಸ್ತ್ರ ಪ್ರಾಧ್ಯಾಪಕ ಡಾ ಐ.ಸಿ.ಮುಳಗುಂದ ಮಾತನಾಡುತ್ತಿರುವದು. ಡಾ. ರಾಜೇಶ್ವರಿ ಮಹೇಶ್ವರಯ್ಯ, ಡಾ ಬಿ.ಎಸ್ ಭಜಂತ್ರಿ ಪುಷ್ಪಲತಾ ಚಿತ್ರದಲ್ಲಿ ಇದ್ದಾರೆ.**

ದೇಶದ ಆರ್ಥಿಕ ಬೆಳವಣಿಗೆಗೆ ಏಡ್ಸನಂತಹ ರೋಗವು ದೇಶದ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಿದೆ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಸಮಾಜಶಾಸ್ತ್ರ ಸಹ ಪ್ರಾಧ್ಯಾಪಕರಾದ ಡಾ.ಐ.ಸಿ.ಮುಳಗುಂದ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ರೆಡ್ ರಿಬ್ಬನ್ ಕ್ಲಬ್ ಸಹಯೋಗದಲ್ಲಿ ಹಮ್ಮಿಕೊಂಡ ಏಡ್ಸ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಸದ್ಯ ಜಗತ್ತಿನಲ್ಲಿ 2015ರ ಅಂಕಿ ಸಂಖೆಗಳ ಪ್ರಕಾರ 2.1 ದಶಲಕ್ಷ ಬಿಲಿಯನ್ ಜನರು ಏಡ್ಸನಂತಹ ಮಾರಣಾಂತಿಕ ರೋಗದಿಂದ ಬಳಲುತ್ತಿದ್ದಾರೆ ಎಂದ ಅವರು ಇದು ಹೆಚ್ಚಾಗಿ ಅಸಹ ಮತ್ತು ಅಸುರಕ್ಷಿತ ಲೈಂಗಿಕ ಕ್ರಿಯೆ ಮತ್ತು ಆಕರ್ಷಣೆಯಿಂದ ಈ ಕಾಯಿಲೆ ಬರುತ್ತಿದೆ ಎಂದರು. ಇದೊಂದು ಜಾಗತಿಕಮಟ್ಟದ ರೋಗವಾಗಿದ್ದು ಇದರ ನಿಯಂತ್ರ ಮತ್ತು ಚಿಕಿತ್ಸೆಗಾಗಿ ಇನ್ನೂ ಕೂಡ ಸಂಶೋಧನೆಗಳು ಜಾಗತಿಕ ಮಟ್ಟದಲ್ಲಿ ನಡಿಯುತ್ತಿದ್ದು, ಇನ್ನುವರೆಗೂ ಈ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಾಗಿಲ್ಲ ಆದ್ದರಿಂದ ನಾವು ಉತ್ತಮ ಹವ್ಯಾಸಗಳನ್ನು ಬೆಳಸಿಕೊಳ್ಳುವುದರಿಂದ ಇಂತಹ ರೋಗವನ್ನು ಹರಡೆದಂತೆ ತಡೆಗಟ್ಟಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಧಾರವಾಡ ಜಿಲ್ಲಾ ಆಸ್ಪತ್ರೆಯ ಆಪ್ತ ಸಮಾಲೋಚಕಿ ಪುಷ್ಪಲತಾ ಸಿ.ಇ. ಮಾತನಾಡಿ ಇದು ವಯಸ್ಕರಲ್ಲಿ ಹೆಚ್ಚು ಕಂಡುಬರುವಂತಹ ಕಾಯಿಲೆ ಆಗಿದ್ದು, ಈ ರೋಗದಿಂದ ರೋಗನಿರೋಧಕ ಶಕ್ತಿ ರೋಗಿಯಲ್ಲಿ ಕಡಿಮೆಗೊಳಿಸುವುದರ ಮೂಲಕ ರೋಗಿಯನ್ನು ಕ್ಷಿಣಿಸುತ್ತದೆ ಎಂದ ಅವರು ಇಂದು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಏಡ್ಸ ರೋಗದ ಕುರಿತು ತಿಳುವಳಿಕೆ ಮತ್ತು ಸಮಾಲೋಚನೆಗಾಗಿ ಆಪ್ತ ಸಲಹಾ ಕೇಂದ್ರಗಳನ್ನು ತೆರೆಯಲಾಗಿದ್ದು ಇವುಗಳ ಮೂಲಕ ಯುವಜನತೆಗೆ ಸಮಾಲೋಚನೆ ನಡೆಸಲಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಇಂದು ವಿದ್ಯಾರ್ಥಿಗಳು ತಮ್ಮ ದೈಹಿಕ ಸಂಪನ್ಮೂಲವನ್ನು ಜಾಗೃತಿಯಿಂದ ಕಾಪಾಡಿಕೊಂಡು ಶೀಲವಂತರಾಗಿ ಬಾಳಬೇಕು ಎಂದರು. ವಿದ್ಯಾರ್ಥಿಗಳು ಪುಸ್ತಕ ಓದುವಿನ ಹವ್ಯಾಸ ಬೆಳಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಏಡ್ಸ ತಡೆಗೆ ಸರಕಾರಿ ಮತ್ತು ಸರರ್ಕಾರೇತ್ತರ ಸಂಸ್ಥೆಗಳ ಪಾತ್ರ ಕುರಿತ ಏರ್ಪಡಿಸಿದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಬಿ.ಎ. ಪದವಿ ಹಂತದ ವಿದ್ಯಾರ್ಥಿಗಳಾದ ಕಲ್ಲನಗೌಡ ಎಂ.ಪಿ ಪ್ರಥಮ ಸ್ಥಾನ ಪಡೆದರೆ, ದ್ವಿತೀಯ ಸ್ಥಾನವನ್ನು ಲಕ್ಷ್ಮಿ ಮೂರಬ ಪಡೆದರು ಮತ್ತು ತೃತ್ತೀಯ ಸ್ಥಾನವನ್ನು ಶಿವಾನಂದ ಚವಾರ ಪಡೆದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿ ಡಾ ಬಿ.ಎಸ್.ಭಜಂತ್ರಿ, ಡಾ.ಝೆಡ್.ಎ.ಗುಳಗುಂದಿ ಶಿಕ್ಷಕ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. ಕುಮಾರಿ ಲಕ್ಷ್ಮಿ ಮತ್ತು ಶಿಲ್ಪಾ ಕಾರ್ಯಕ್ರಮವನ್ನು ನಿರೂಪಿಸಿದರು. ಕುಮಾರಿ ಸಕ್ಕುಬಾಯಿ ಬಂಡಿವಡ್ಡರ ವಂದಿಸಿದರು.

# 'ಗುರುಪೂರ್ಣಿಮ ಮಹತ್ವ'

ಈ ವರ್ಷದ ಜುಲೈ 18 ಏನು ವಿಶೇಷ ಗೊತ್ತಾ ಗೆಳೆಯರೇ? ಯೋಚಿಸಿ ಸ್ವಲ್ಪ ನೋಡೋಣ ಅದು ಏನು ಅಂತೀರಾ.... ಪ್ರತಿ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಏನಾದರು ಸಾಧನೆ ಮಾಡಿದ್ದಾನೆ ಅಂತ ಇದ್ದರೆ ಅದು ಮೂರು ವ್ಯಕ್ತಿಗಳಿಂದ ಅವರು ಯಾರೆಂದರೆ ತಂದೆ, ತಾಯಿ ಹಾಗೂ ಗುರು ಈ ಮೂರು ವ್ಯಕ್ತಿಗಳಲ್ಲಿ ತಂದೆ, ತಾಯಿ ಒಂದು ಕಡೆ ಪ್ರೋತ್ಸಾಹಿದರೆ ಒಬ್ಬ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯಲ್ಲಿ ಒಬ್ಬ ಗುರುವಿನ ಪಾತ್ರ ಮುಖ್ಯವಾಗಿರುತ್ತದೆ. ಗಾದೆ ಮಾತಿದೆ ಹಿಂದೆ ಗುರು ಇರಬೇಕು ಮುಂದೆ ಗುರಿ ಇರಬೇಕು ಎಂದು. ಹಾಂ ಯಾಕೆ ಇದನ್ನೆಲ್ಲ ಹೇಳ್ತಾ ಇದ್ದೀನಿ ಅಂದರೆ ಈ ದಿನ ಅಂದರೆ ಜುಲೈ 18 ಗುರುಪೂರ್ಣಿಮೆಯ ದಿನ ಅಂದರೆ ಗುರುವನ್ನು ಸ್ಮರಿಸುವ ದಿನ. ನಾವು ಹಲವಾರು ದಿನಾಚರಣೆಯನ್ನು ಮಾಡುತ್ತೇವೆ. ಅದೇ ರೀತಿ ಗುರುಪೂರ್ಣಿಮೆಯೂ ಕೂಡಾ ಒಂದು ಪವಿತ್ರವಾದ ದಿನವಾಗಿದೆ. ಈ ಗುರುಪೂರ್ಣಿಮೆಯ ವಿಶೇಷತೆ ಏನೆಂದರೆ ಅದು ಶ್ರೀ ವೇದ ವ್ಯಾಸರ ಜನುಮ ದಿನ. ಆದರೆ ಒಂದು ವಿಷಾದದ ಸಂಗತಿಯೆಂದರೆ ಈ ದಿನವನ್ನು ಆಚರಿಸುವವರು ತೀರಾ ಕಡಿಮೆ :- ಆದರೆ ನಮ್ಮ ಮಹಾವಿದ್ಯಾಲಯದಲ್ಲಿ ಸಂಸ್ಕೃತ-ಪ್ರಾಕೃತ-ಯೋಗ ವಿಭಾಗದಿಂದ ಗುರುಪೂರ್ಣಿಮೆ ದಿನವನ್ನು ನಾವು ತಪ್ಪದೇ ಆಚರಿಸುತ್ತಿದ್ದೇವೆ ಎನ್ನುವುದು ಒಂದು ಹೆಮ್ಮೆಯ ವಿಷಯ ಆ ದಿನ ನಾವು ಸಂಸ್ಕೃತ-ಪ್ರಾಕೃತ-ಯೋಗ ವಿಭಾಗದಿಂದ ಒಂದು ಚಿಕ್ಕದಾದ ಚೊಕ್ಕದಾದ ಕಾರ್ಯಕ್ರಮವನ್ನು ಮಾಡಿದೆವು. ನಮ್ಮ ವಿಭಾಗದ ಉಪನ್ಯಾಸಕರು ಹಲವಾರು ನಿದರ್ಶನಗಳನ್ನು ನೀಡಿ ಗುರುವಿನ ಮಹತ್ವವನ್ನು ತಿಳಿಸಿಕೊಟ್ಟರು. ಅದೇ ದಿನ ನಾವು ಒಂದು ಪ್ರಮಾಣವನ್ನು ಮಾಡಿದೆವು. ಅದೇನೆಂದರೆ "ಒಂದು ಅಕ್ಷರವನ್ನು ಯಾರೇ ಕಲಿಸಿದರೂ ಅವರು ಗುರುವೇ ಆಗುತ್ತಾರೆ. ಗುರುಗಳನ್ನು ನಾವು ಯಾವುದೇ ಕಾರಣಕ್ಕೂ ಅಪಹಾಸ್ಯ ಮಾಡುವುದಿಲ್ಲವೆಂದು"

**ಮಹತ್ವ:-** ಶ್ರೀ ಮಹರ್ಷಿ ವೇದವ್ಯಾಸರ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ನಾಲ್ಕು ವೇದಗಳನ್ನು, 18 ಪುರಾಣಗಳನ್ನು, ಮಹಾಭಾರತ ಮತ್ತು ಶ್ರೀಮದ್ಭಾಗವತವನ್ನು ರಚಿಸಿದ ಮಹಾತ್ಮರಾಗಿದ್ದಾರೆ. ಈ ದಿನದಂದು ಹಿಂದೂ ಆಧ್ಯಾತ್ಮಿಕ ಗುರುಗಳನ್ನು ಅವರ ಜೀವನ ಮತ್ತು ಕಲಿಸುವಿಕೆಗಳನ್ನು ಸ್ಮರಿಸಿಕೊಂಡು ಅವರಿಗೆ ಈ ದಿನ ಗೌರವ ಸಲ್ಲಿಸಲಾಗುತ್ತದೆ. ಹಲವಾರು ದೇವಸ್ಥಾನಗಳಲ್ಲಿ ವ್ಯಾಸ ಪೂಜೆಯನ್ನು ನೇರವೇರಿಸಲಾಗುತ್ತದೆ.

ಅದೇ ರೀತಿ ಗುರುಪೂರ್ಣಿಮೆಯಂದು ಚಾತುರ್ಮಾಸದ ಆರಂಭವಾಗುತ್ತದೆ. ರೈತರಿಗೆ ಈ ದಿನ ಅತ್ಯಂತ ಮಹತ್ವದ್ದಾಗಿದೆ. ಮಳೆಗಾಲದ ಪ್ರಾರಂಭವನ್ನು ಸೂಚಿಸುವ ಗುರುಪೂರ್ಣಿಮ ದವಸ ಧಾನ್ಯಗಳ ಬೆಳೆಯುವಿಕೆಗೆ ಅತೀ ಮುಖ್ಯ ಸಮಯವಾಗಿದೆ. ಬೇಸಿಗೆಯ ತಾಪದಿಂದ ತಂಪಿನ ಅನುಭೂತಿಯನ್ನು ನಮಗೆ ನೀಡುವ ಮಾನಸೂನ್ ಅಥವಾ ಮಳೆಗಾಲ ನಮ್ಮ ಆಧ್ಯಾತ್ಮಿಕ ಪಾಠಗಳನ್ನು ಆರಂಭಿಸಲು ಮುಖ್ಯವಾದ ದಿನಗಳಾಗಿವೆ. ಆದ್ದರಿಂದ ಗುರುಪೂರ್ಣಿಮೆಯಂದು ಸ್ವಲ್ಪ ಹೊತ್ತನ್ನು ಗುರುವಿಗಾಗಿ ಮೀಸಲಿಟ್ಟು ನಮ್ಮ ಜ್ಞಾನದ ಕಡೆಗೆ ಕೊಂಡ್ಯೊಯ್ದ ಆ ಮಹಾನ್ ಚೇತನಕ್ಕೆ ನಮಸ್ಕರಿಸೋಣ.

ನಮ್ಮ ಹಿಂದು ಧರ್ಮದಲ್ಲಿ ಗುರು ಅಥವಾ ಶಿಕ್ಷಕರನ್ನು ದೇವರಿಗೆ ಹೋಲಿಸಲಾಗುತ್ತದೆ. ನಿಜವಾದ ಒಬ್ಬ ಗುರು ವ್ಯಕ್ತಿಗೆ ಹಾಗು ಮಹಾನ್ ಶಕ್ತಿಗೆ ಒಂದು ಸಂಪರ್ಕ ಅಥವಾ ಕೊಂಡಿ ಇದ್ದ ಹಾಗೆ. ಆದ್ದರಿಂದಲೇ ಗುರುಪೂರ್ಣಿಮೆಯಂದು ಗುರುಗಳಿಗೆ, ಶಿಕ್ಷಕರಿಗೆ ಗೌರವ ತೋರಿಸುವ ನಿಟ್ಟಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ. ನಮ್ಮನ್ನು ಶಿಕ್ಷಣದ ಹಾಗೂ ಸಾತ್ವಿಕ, ನೈತಿಕ ಮೌಲ್ಯಗಳನ್ನು ತಿಳಿದು ಜೀವನದಲ್ಲಿ ಒಬ್ಬ ಒಳ್ಳೆ ವ್ಯಕ್ತಿಯನ್ನಾಗಿ ರೂಪಿಸುವ ಗುರುಗಳಿಗೆ ನಾವು ಅದೆಷ್ಟೇ ಋಣಿಯಾದರು ಸಾಲದು. ಅಂತಹ ಗುರುಗಳಿಗೆ ನಾವು ಪ್ರೀತಿ ಶ್ರದ್ಧೆಯ ಮೂಲಕ ಅವರ ಬೋಧನೆಯನ್ನು ಪಾಲಿಸಿದರೆ ಅದಕ್ಕಿಂತ ಬೇರೇನು ಬೇಡವಲ್ಲವೇ ಸ್ನೇಹಿತರೆ ಇನ್ನಾದರೂ ಗುರುಗಳಿಗೆ ತೆಗಳದೇ ಅವರನ್ನು ಗೌರವಿಸೋಣ.......

**-ಪೂರ್ಣಚಂದ್ರ ವಿ. ಹುಲಿಕಂತೇಮಠ**

# ಕಾಮರ್ಸ್ ವಿಭಾಗಕ್ಕೆ ಸಮಗ್ರ ವೀರಾಗ್ರಣಿ



**ಪ್ರಾಧ್ಯಾಪಕರಾದ ಶ್ರೀಮತಿ ಸ್ಫೋರ್ತಿ ಶಿಂಥೆ, ಶ್ರೀಮತಿ ಎಸ್ ಜಿ ಮುಳೂಗುಂದಮಠ, ವಿಜಯ ಬಿರಾದಾರ, ಸಂಯೋಜಕರಾದ ಡಾ ಕಿರಣಕುಮಾರ, ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ, ಬಿ.ಬಿ.ಬಿರಾದಾರ,ಮಾನವ ಸಂಪನ್ಮೂಲ ಅಧಿಕಾರಿ ಆರ್ ಆರ್ ಹಿರೇಮಠ ಮತ್ತು ಹರ್ಷದ ಗೋಡಸೆ ಚಿತ್ರದಲ್ಲಿ ಇದ್ದಾರೆ**

ಧಾರವಾಡದ ಸಿ.ಎಸ್ ಆಯ್ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ರಾಜ್ಯಮಟ್ಟದ ತಿತಿಕ್ಷಾ ಕಾಮರ್ಸ ಫೆಸ್ಟ್-2017 ನಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿಬಿಎ ಮತ್ತು ಬಿ.ಕಾಂ ಸಿ.ಎಸ್ ವಿಭಾಗದ ವಿದ್ಯಾರ್ಥಿಗಳು ಸಮಗ್ರ ವೀರಾಗ್ರಣಿಯನ್ನು ಪಡೆದು ಕೊಂಡಿದ್ದಾರೆ. ಈ ಕಾಮರ್ಸ ಹಬ್ಬದಲ್ಲಿ ರಾಜ್ಯದ ಒಟ್ಟು 17 ಕಾಲೇಜುಗಳು ಭಾಗವಹಿಸಿದ್ದು, ಒಟ್ಟು 3 ಸ್ಪರ್ಧೆಗಳಲ್ಲಿ ಭಾಗವಹಿಸಿ ಎರಡರಲ್ಲಿ ಪ್ರಥಮ ಸ್ಥಾನ, ಒಂದರಲ್ಲಿ ದ್ವಿತಿಯ ಸ್ಥಾನವನ್ನು ಗಳಿಸಿದ್ದಾರೆ ಇದರಲ್ಲಿ ನಾಲ್ಕು ವಿದ್ಯಾರ್ಥಿಗಳು ಮತ್ತು ನಾಲ್ವರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಈ ಸಾಧನೆಗೆ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಹಾಗೂ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

**ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.**